# ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಜೆ. ಎಂ ಎಫ್. ಸಿ ನ್ಯಾಯಾಲಯ

# ಹಿರೇಕೆರೂರು

ಸಿ.ಸಿ. ನಂಃ 98/2023

**ಪಿ.ಡಬ್ಲ್ಯೂಃ 2**

ಸಿ.ಡಬ್ಲ್ಯೂಃ 2

ಸಾಕ್ಷಿದಾರರ ಹೆಸರುಃ – ಶಂಭುಗೌಡ

ತಂದೆ ಹೆಸರು – ಭರಮಗೌಡ ಮರ್ಕಳ್ಳಿ

ವಯಸ್ಸುಃ – 61 ವರ್ಷ

ಉದ್ಯೋಗ – ವ್ಯವಸಾಯ

ವಾಸಸ್ಥಳ – ದೂದಿಹಳ್ಳಿ

ದಿನಾಂಕಃ 02–06–2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ – ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಸಾಕ್ಷಿದಾರರಿಗೆ ನಿಪಿ-2 ರ ಮಹಜರನ್ನು ತೋರಿಸಲಾಗಿ ಅದರಲ್ಲಿನ ಅವರ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು **ನಿಪಿ-2(ಬಿ)** ಎಂದು ಗುರುತಿಸಲಾಯಿತು. ಸಾಕ್ಷಿದಾರರು ನಿಪಿ-3 ರ ಫೋಟೋವನ್ನು ನೋಡಿ ಗುರುತಿಸಿರುತ್ತಾರೆ. ಸುಮಾರು 4 ವರ್ಷಗಳ ಹಿಂದೆ ರುದ್ರಗೌಡ ಹಾಗೂ ಕಲಪ್ಪ ರವರ ನಡುವೆ ಜಗಳವಾಗಿದೆ ಎಂದು ಪೋಲಿಸರು ಬಂದಿದ್ದಾಗ ಸಹಿ ಮಾಡಿದ್ದೆ. ನನ್ನ ಸಮಕ್ಷಮ ಏನು ಮಾಡಿಲ್ಲ. ನಾನು ಪಕ್ಕದ ಮನೆಯವನು ಆಗಿದ್ದರಿಂದ ಪೋಲಿಸರು ನನ್ನನ್ನು ಕರೆಸಿ ಮೇಲೆ ಹೇಳಿದ ದಾಖಲೆಗೆ ಸಹಿ ಮಾಡಿಸಿಕೊಂಡಿದ್ದರು. ಜಾಗವನ್ನು ಸುಮಂಗಲ ತೋರಿಸಿದ್ದರು. ಆ ಸಮಯದಲ್ಲಿ ರಘು ಖಂಡೆಬಾಗೂರ ಇದ್ದರು. ಪಂಚನಾಮೆ ಮಾಡಿದ್ದೇವೆ, ಬಂದು ಹೋಗಿದ್ದೇವೆ ಎಂದು ಪೋಲಿಸರು ಹೇಳಿದರು ಅವರು ಸಹಿ ಮಾಡು ಎಂದು ಹೇಳಿದ್ದರಿಂದ ಸಹಿ ಮಾಡಿದ್ದೇನೆ. ಆಗ ಸಮಯ ಮಧ್ಯಾಹ್ನ 2-30 ರಿಂದ 3-00 ಗಂಟೆಯಾಗಿತ್ತು. ಇಷ್ಟು ಬಿಟ್ಟು ಬೇರೆ ಮಾಹಿತಿ ನನಗೆ ಇಲ್ಲ.

**ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.**

## ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ದಿಃ 20–02–2022 ರಂದು ಪೋಲಿಸರು ಬಂದಾಗ ಸುಮಂಗಲಾ ರವರು ಈಗ ನ್ಯಾಯಾಲಯದಲ್ಲಿ ತೋರಿಸಿದ ಮು.ಮಾ–1 ಬಡಿಗೆಯನ್ನು ತೋರಿಸಿದ್ದರು ಎಂದರೆ ಸರಿ. ಇದೆ ಬಡಿಗೆಯಿಂದ ಹಲ್ಲೆ ಮಾಡಿದ್ದರು ಎಂದು ಸುಮಂಗಲಾ ರವರು ಪೋಲಿಸರು ಹಾಜರು ಪಡಿಸಿದ್ದರು ಎಂದರೆ ಈ ವಿಷಯ ನನಗೆ ಗೊತ್ತಿಲ್ಲ. ಪಂಚನಾಮೆಯನ್ನು ಸುಮಂಗಲಾ ರವರ ಹಿತ್ತಲಿನಲ್ಲಿ ಮಾಡಿದರು ಎಂದರೆ ಸರಿ. ಮು.ಮಾ–1 ಬಡಿಗೆಯನ್ನು ಪೋಲಿಸರು ಜಪ್ತು ಮಾಡಿದರು ಎಂದರೆ ಗೊತ್ತಿಲ್ಲ.

ಸಿ.ಸಿ. ನಂಃ 98/2023

**ಪಿ.ಡಬ್ಲ್ಯೂಃ 2**

ಸಿ.ಡಬ್ಲ್ಯೂಃ 2

**<u>ಪಾಟೀ ಸವಾಲುಃ 1, 3, 4 ಹಾಗೂ 7 ನೇ ಆರೋಪಿಗಳ ಪರ ಶ್ರೀ ಎ. ಎ. ಇ. ವಕೀಲರಿಂದಃ</u>**

ಪೋಲಿಸರು ನನ್ನ ಸಹಿ ತೆಗೆದುಕೊಂಡ ದಾಖಲೆಯಲ್ಲಿ ಏನು ಬರೆದಿದ್ದರೆಂದು ನನಗೆ ಗೊತ್ತಿಲ್ಲ. ಪೋಲಿಸರು ಸಹಿ ಮಾಡಲು ಹೇಳಿದ್ದರಿಂದ ಸಹಿ ಮಾಡಿರುತ್ತೇನೆ. ಪೋಟೋ ತೆಗೆದ ಪೂರ್ವಕ್ಕೆ ಶರಣಮ್ಮ ಮರ್ಕಳ್ಳಿ ರವರ ಮನೆ ಮತ್ತು ಖಾಲಿ ಜಾಗ, ಪಶ್ಚಿಮಕ್ಕೆ ಭರಮಗೌಡರವರ ಮನೆ ಮತ್ತು ಖಾಲಿ ಜಾಗ, ಉತ್ತರಕ್ಕೆ ಕುಮಾರ ರವರ ಖಾಲಿ ಜಾಗ, ದಕ್ಷಿಣಕ್ಕೆ ಪಂಚಾಯಿತಿ ರಸ್ತೆ. ಪಿರ್ಯಾದಿಗೆ ಅನುಕೂವಾಗಲಿ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 2, 5 ಹಾಗೂ 6 ನೇ ಆರೋಪಿಗಳ ಪರ ಶ್ರೀಮತಿ ಆರ್. ಎಸ್ . ಹೆಚ್. ವಕೀಲರಿಂದಃ</u>**

1, 3, 4 ಹಾಗೂ 7 ನೇ ಆರೋಪಿಗಳ ಪರ ಮಾಡಿದ ಪಾಟೀ ಸವಾಲು ಅಳವಡಿಸಿಕೊಳ್ಳುವುದಾಗಿ ಹೇಳಿದ್ದರಿಂದ ಸದರಿ ಪಾಟೀ ಸವಾಲನ್ನು 2, 5 ಹಾಗೂ 6 ನೇ ಆರೋಪಿಗಳ ಪರ ಮಾಡಿದ ಪಾಟೀ ಸವಾಲು ಎಂದು ಪರಿಗಣಿಸಿದೆ.

**<u>ಮರು ವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು )

ಓ ಹೆ ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ.

ದಿನಾಂಕಃ 02-06-2026

Sd/-

ಹಿರಿಯ ಸಿ ಜೆ ಮತ್ತು ಜೆ. ಎಂ.ಎಫ್. ಸಿ,

ಹಿರೇಕೆರೂರು